# ಸೌಂದರ್ಯವರ್ಧಕಗಳು ಎಷ್ಟು ಸುರಕ್ಷಿತ?



ಹೆಚ್ಚಿನ ಸೌಂದರ್ಯವರ್ಧಕಗಳಲ್ಲಿ ಅಪಾಯಕಾರಿ ರಾಸಾಯನಿಕಗಳ ಬಳಕೆ ಅಧಿಕವಾಗಿದೆ. ಇವುಗಳ ನಿರಂತರ ಬಳಕೆಯಿಂದ ತ್ವಚೆ ಸಮಸ್ಯೆ ಮಾತ್ರ ವಲ್ಲ, ಹಲವು ಗಂಭೀರ ಕಾಯಿಲೆಗಳಿಗೆ ಈಡಾಗುವ ಅಪಾಯವೂ ಇದೆ.

■ ಸುಧಾ ಹೆಗಡೆ



ಮುಖ, ತ್ವಚೆ, ತುಟಿ, ಕಣ್ಣು, ಉಗುರು, ಕೂದಲು.. ಎಂದೆಲ್ಲ ದೇಹದ ಅಂಗಾಂಗಗಳ ಅಂದ– ಚೆಂದ ಹೆಚ್ಚಿಸುವ ನೂರಾರು ಬಗೆಯ ಸೌಂದರ್ಯವರ್ಧಕಗಳು, ಹಲವಾರು ಬ್ರ್ಯಾಂಡ್‌ಗಳ ಉತ್ಪನ್ನಗಳು ಮಾರುಕಟ್ಟೆಗೆ ಲಗ್ಗೆಯಿಟ್ಟಿವೆ. ಲಿಪ್‌ಸ್ಟಿಕ್, ಲಿಪ್‌ಬಾಮ್, ಫೌಂಡೇಶನ್, ಲೋಶನ್, ಫೇಸ್‌ವಾಷ್, ಸ್ಕ್ರಬ್, ಕ್ಲೆನ್ಸಿಂಗ್ ಮಿಲ್ಕ್, ಮಸ್ಕರಾ, ಐಲೈನರ್, ಶಾಂಪೂ, ನೈಲ್ ಪಾಲಿಶ್, ಮೇಕಪ್ ರಿಮೂವರ್.. ಎಂದೆಲ್ಲ ಉದ್ದನೆಯ ಪಟ್ಟಿಯನ್ನೇ ನೀಡಬಹುದು. ಆದರೆ ಇವುಗಳನ್ನು ಬಳಸುವ ಮುನ್ನ ಇವೆಲ್ಲ ನಿಮ್ಮ ತ್ವಚೆಗೆ, ಕೂದಲಿಗೆ ಎಷ್ಟು ಸುರಕ್ಷಿತ ಎಂದು ಯಾವತ್ತಾದರೂ ಯೋಚಿಸಿದ್ದೀರಾ?

ಕಳೆದ ವರ್ಷ ವಿದ್ಯಾರ್ಥಿನಿಯೊಬ್ಬಳು ಶಾಲಾ ವಾರ್ಷಿಕೋತ್ಸವದ ಸಂದರ್ಭದಲ್ಲಿ ತುಟಿಗೆ ಬಳಿದುಕೊಂಡ ಲಿಪ್‌ಸ್ಟಿಕ್‌ನಿಂದಾಗಿ ಇಡೀ ಮುಖ ಭಯಾನಕವಾಗಿ ಊದಿಕೊಂಡು ಸಂಕಷ್ಟಕ್ಕೀಡಾದ ಘಟನೆ ವರದಿಯಾಗಿತ್ತು. ಹಿಂದೊಮ್ಮೆ ಮೈಸೂರಿನಲ್ಲಿ ವರ ನೋಡಲು ಬರುತ್ತಾನೆಂದು ಯುವತಿಯೊಬ್ಬಳು ಮುಖಕ್ಕೆ ಬ್ಲೀಚಿಂಗ್ ಮಾಡಿಸಿಕೊಂಡು ಮುಖವೆಲ್ಲಾ ಕಪ್ಪಾಗಿ ಬ್ಲೀಚಿಂಗ್ ಕಂಪೆನಿಯ ವಿರುದ್ಧ ದಾವೆ ಹೂಡಿದ್ದನ್ನು ಇಲ್ಲಿ ಸ್ಮರಿಸಬಹುದು. ಆಗಾಗ ಇಂತಹ ಕೆಲವು ಘಟನೆಗಳು ವರದಿಯಾಗುತ್ತಲೇ ಇವೆ. ಆಗೆಲ್ಲ 'ಅದು ಅವರಿಗೆ ಅಲರ್ಜಿಯಾಗಿರಬಹುದು' ಎಂದು ನುಣುಚಿಕೊಳ್ಳುವಂತಹ ಪ್ರಸಂಗಗಳೂ ನಡೆದಿವೆ.

ಆದರೆ ಈ ಅಲರ್ಜಿ ಯಾಕಾಗುತ್ತದೆ? ಅದರಲ್ಲಿರುವ ರಾಸಾಯನಿಕಗಳು ತ್ವಚೆಯ ಮೇಲೆ ಅಥವಾ ಕೂದಲಿನ ಮೇಲೆ ಈ ವ್ಯತಿರಿಕ್ತ ಪರಿಣಾಮ ಬೀರುವುದು ಯಾಕೆ ಎಂದು ಕೆದಕುತ್ತ ಹೋದರೆ ಭಯಾನಕ ವಿವರಗಳು ಹೊರಬೀಳುತ್ತವೆ.

ರಬ್ಬರ್, ಪ್ಲಾಸ್ಟಿಕ್‌ನಂತಹ ವಸ್ತುಗಳನ್ನು ತಯಾರಿಸಲು ಬಳಸುವ ರಾಸಾಯನಿಕಗಳು, ಭಾರ ಲೋಹಗಳು ನಿತ್ಯ ಬಳಸುವಂತಹ ಲಿಪ್‌ಸ್ಟಿಕ್‌ನಲ್ಲಿ, ಐಲೈನರ್‌ನಲ್ಲಿ ಸೇರಿಕೊಂಡರೆ ಆಗುವ ಪರಿಣಾಮಗಳನ್ನು ಊಹಿಸಿಕೊಳ್ಳಿ. ಈಗ ಆಗುತ್ತಿರುವುದೂ ಅದೇ. ಬಹತೇಕ ಉತ್ಪನ್ನಗಳಲ್ಲಿ ಕ್ಯಾನ್ಸರ್‌ಕಾರಕ (ಕಾರ್ಸಿನೊಜೆನ್)ಗಳು, ಅಂದರೆ ಕ್ಯಾನ್ಸರ್‌ಗೆ ಕಾರಣವಾಗುವ ರಾಸಾಯನಿಕಗಳು ಇವೆ. ಜೊತೆಗೆ ಸೌಂದರ್ಯವರ್ಧಕಗಳ ಗುಣಮಟ್ಟ ಹಾಗೂ ಉತ್ಪಾದನೆಯನ್ನು ನಿಯಂತ್ರಿಸುವಂತಹ ಕಠಿಣ ಕಾನೂನುಗಳೂ ನಮ್ಮಲ್ಲಿಲ್ಲ. ಹೀಗಾಗಿ ಇವುಗಳನ್ನು ಬಳಸುವ ಅಮಾಯಕರು ನಿತ್ಯ ಅಪಾಯಗಳಿಗೆ ಈಡಾಗುತ್ತಲೇ ಇರುವುದು ದುರಂತವೇ ಸರಿ.



ಲಿಪ್‌ಸ್ಟಿಕ್ ಅನ್ನೇ ತೆಗೆದುಕೊಳ್ಳಿ. ತುಟಿಗೆ ರಂಗಿನ ಲೇಪನ ನೀಡಿ ಸೌಂದರ್ಯವನ್ನು ವರ್ಧಿಸುವ ಇದು ಎಷ್ಟೆಲ್ಲಾ ಅಪಾಯಕಾರಿ ಅಂಶಗಳನ್ನು ಹೊಂದಿದೆ! ಎಲ್ಲಾ ಬ್ರ್ಯಾಂಡ್‌ಗಳಲ್ಲೂ ಅಲ್ಲ, ಬಹುತೇಕ ಉತ್ಪನ್ನಗಳಲ್ಲಿ ಪ್ರಿಸರ್ವೇಟಿವ್ ಹಾಗೂ ಮಿಥೈಲ್‌ಪ್ಯಾರಾಬೆನ್ ಎಂಬ ಶಿಲೀಂಧ್ರ ನಿರೋಧಕ ವಸ್ತುವಿರುತ್ತದೆ. ರಬ್ಬರ್ ಹಾಗೂ ಪ್ಲಾಸ್ಟಿಕ್‌ನಲ್ಲಿ ಬಳಸುವ ಟೋಕೊಫೆರಿಲ್ ಅಸಿಟೇಟ್, ಭಾರ ಲೋಹಗಳಾದ ಸೀಸ, ಪಾದರಸ, ಸತು, ಆರ್ಸೆನಿಕ್, ಅಲ್ಯೂಮಿನಿಯಂ, ಕ್ರೋಮಿಯಂ ಮೊದಲಾದವುಗಳಲ್ಲದೇ ಕಾರ್ಬನ್ ಬ್ಲ್ಯಾಕ್ ಎಂಬ ವರ್ಣದ್ರವ್ಯವಿರುತ್ತದೆ.

ಇವುಗಳನ್ನು ಬಳಸಿ ಮಾಡಿದಂತಹ ಲಿಪ್‌ಸ್ಟಿಕ್‌ನ ನಿರಂತರ ಬಳಕೆ ಆರೋಗ್ಯಕ್ಕೆ ಮಾರಕ. ಕ್ಯಾನ್ಸರ್ ಉಂಟು ಮಾಡಬಹುದಾದಂತಹ ಈ ರಾಸಾಯನಿಕಗಳು ನರಮಂಡಲ ಹಾಗೂ ನಿರ್ನಾಳ ಗ್ರಂಥಿ (ಹಾರ್ಮೋನ್) ವ್ಯವಸ್ಥೆಯನ್ನೂ ಹಾನಿ ಮಾಡಬಲ್ಲವು. ಗರ್ಭಸ್ರಾವ, ಸಂತಾನಹೀನತೆ, ತಡವಾಗಿ ಹರೆಯಕ್ಕೆ ಕಾಲಿಡುವಂತಹ ಸಮಸ್ಯೆಗಳು ಮಾತ್ರವಲ್ಲ, ತ್ವಚೆಗೆ ಕೂಡಾ ಶಾಶ್ವತ ಹಾನಿ ಸಂಭವಿಸಬಹುದು. ಅಂದರೆ ಚರ್ಮ ಸುಟ್ಟಂತಾಗುವುದು, ಹುರುಪೆ ಏಳುವುದು, ಬೊಕ್ಕೆಗಳು ಕಾಣಿಸಿಕೊಳ್ಳುವುದು, ದದ್ದು ಏಳುವಂತಹ ಸಮಸ್ಯೆಗಳು ಅಜೀವ ಪರ್ಯಂತ ಕಾಡಬಹುದು.

'ಇದೇ ರೀತಿ ಒಣಗಿದ ತುಟಿ ತೇವ ಕಾಯ್ದುಕೊಳ್ಳಲು ಬಳಸುವ ಲಿಪ್‌ಬಾಮ್‌ನಲ್ಲಿ ಥಾಲೇಟ್‌ನಂತಹ ಅಪಾಯಕಾರಿ ರಾಸಾಯನಿಕದ ಜೊತೆ ಅತಿ ನೇರಳೆ ಕಿರಣದಿಂದ ರಕ್ಷಿಸಲು ಬೆಂಜೊಫಿನೋನ್‌ನಂತಹ ವಸ್ತುವನ್ನೂ ಬಳಸಲಾಗುತ್ತದೆ. ಇದರ ಸುದೀರ್ಘ ಬಳಕೆಯಿಂದ ಕ್ಯಾನ್ಸರ್, ಸಂತಾನಹೀನತೆ,